# ಕಾಳ್ಗಿಚ್ಚಿನೂರಲ್ಲಿದ್ದ ನೋರಾ



ಅಮೆರಿಕದ ಲಾಸ್‌ಏಂಜಲೀಸ್‌ನಲ್ಲಿ ಕಾಳ್ಗಿಚ್ಚು ವ್ಯಾಪಿಸಿಕೊಂಡು, ಅಗಣಿತ ಜನ ಪಡಿಪಾಟಲು ಪಟ್ಟಿದ್ದನ್ನು ಕಂಡೆವು. ಹಾಲಿವುಡ್ ನಟ–ನಟಿಯರು ಕೂಡ ಪ್ರಕೃತಿಯು ಈ ಪರಿಯಾಗಿ ಮುನಿಸಿಕೊಂಡಾಗ ನಿರುತ್ತರರಾದರು.

ಅವಘಡ ಸಂಭವಿಸಿದಾಗ ಹಿಂದಿ ಚಿತ್ರನಟಿ ಹಾಗೂ ನೃತ್ಯಗಾರ್ತಿ ನೋರಾ ಫತೇಹಿ ಅವರೂ ಅಲ್ಲಿದ್ದರು. ಅವರು ಇಳಿದುಕೊಂಡಿದ್ದ ಹೋಟೆಲ್‌ನವರು ಐದೇ ನಿಮಿಷದಲ್ಲಿ ರೂಮ್ ಖಾಲಿ ಮಾಡುವಂತೆ ಸೂಚನೆ ಬಂದಿದೆ ಎಂದು ತಿಳಿಸಿದಾಗ, ಅವರು ಕೂಡ ಕಂಗಾಲಾದರು. ಬಟ್ಟೆಬರೆಗಳನ್ನೆಲ್ಲ ಲಗುಬಗನೆ ಪ್ಯಾಕ್ ಮಾಡಿದರು. ಅಷ್ಟಾದ ಮೇಲೆ ಒಂದು ವಿಡಿಯೊ ಕೂಡ ಚಿತ್ರೀಕರಿಸಿ, ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದರು.

‘ಲಾಸ್‌ಏಂಜಲೀಸ್ ಕಾಳ್ಗಿಚ್ಚು ನೋಡಿದರೆ ಬೆಚ್ಚುವಂತಾಗುತ್ತಿದೆ. ನಾನು ಬದುಕಿನಲ್ಲಿಯೇ ಇಂತಹುದನ್ನು ಕಂಡಿರಲಿಲ್ಲ. ಇದು ದೊಡ್ಡ ದುರಂತ. ಈ ಕ್ಷಣ ನಗುನಗುತ್ತಾ ಇದ್ದವರು ಮರುಕ್ಷಣವೇ ಚಿಂತಾಕ್ರಾಂತರಾಗುವ ಸ್ಥಿತಿ. ನಾನು ಇಲ್ಲಿಂದ ಬೇಗ ಹೊರಟು ವಿಮಾನ ನಿಲ್ದಾಣದ ಬಳಿಗೆ ತಲುಪಿಕೊಳ್ಳುವೆ. ಮೊದಲೇ ನಿಗದಿಯಾಗಿರುವ ವಿಮಾನ ಅಲ್ಲಿಂದ ಸಮಯಕ್ಕೆ ಸರಿಯಾಗಿ ಹಾರಲಿದೆ ಎಂದು ಭಾವಿಸಿರುವೆ. ಮುಂದೆ ಏನಾದೀತು ಎನ್ನುವುದನ್ನು ಅಪ್‌ಡೇಟ್ ಮಾಡುವೆ’ ಎಂಬರ್ಥದ ಮಾತನ್ನು ನೋರಾ ವಿಡಿಯೊ ಮೂಲಕ ತಿಳಿಸಿದ್ದರು.

ನೋರಾ ಅವರಷ್ಟೇ ಅಲ್ಲದೆ ನಟಿ ಪ್ರಿಯಾಂಕಾ ಚೋಪ್ರಾ ಕೂಡ ಲಾಸ್ ಏಂಜಲೀಸ್‌ನ ಕಾಳ್ಗಿಚ್ಚಿನ ಕರಾಳಮುಖಗಳ ಬಗೆಗೆ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್‌ಗಳನ್ನು ಹಾಕಿದ್ದಾರೆ.

ನೋರಾ ನಟಿಯಾಗಿ ಹೆಸರು ಮಾಡಿದ್ದಕ್ಕಿಂತ ನೃತ್ಯ ಲಾಲಿತ್ಯದಿಂದಲೇ ಗುರುತಾದವರು. ಡಾನ್ಸ್ ರಿಯಾಲಿಟಿ ಶೋ ತೀರ್ಪುಗಾರರಾಗಿ ಅವರು ಇತ್ತೀಚೆಗೆ ಹೆಚ್ಚು ಕಾಣಿಸಿಕೊಂಡಿದ್ದಾರೆ. ತೆಲುಗಿನ ‘ಮಟ್ಕಾ’ ಸಿನಿಮಾಗೆ ಅವರು ಕಳೆದ ವರ್ಷ ಸಹಿ ಹಾಕಿದ್ದರು. ಕನ್ನಡದ ‘ಕೆಡಿ’ ಚಿತ್ರದಲ್ಲಿ ಅಭಿನಯಿಸಲೂ ಅವರು ಒಪ್ಪಿದ್ದಾರೆ. ■

# ರೆಟ್ರೊ ಸೂರ್ಯ





ಸೂರ್ಯ ಅಭಿನಯದ ಹೊಸ ಚಿತ್ರಕ್ಕೆ ‘ರೆಟ್ರೊ’ ಎಂದು ನಾಮಕರಣವಾಗಿದೆ. ಅದಕ್ಕಿಂತ ಮುಖ್ಯವಾಗಿ ಸಿನಿಮಾ ಮೇ 1ರಂದು ತೆರೆಕಾಣಲಿದೆ ಎಂದು ದಿನಾಂಕವನ್ನೂ ಪ್ರಕಟಿಸಲಾಗಿದೆ. ನಿರ್ದೇಶಕ ಕಾರ್ತಿಕ್ ಸುಬ್ಬರಾಜ್ ಈ ಸಲ ಸೂಕ್ತ ರೀತಿಯಲ್ಲಿ ಯೋಜಿಸಿ ಚಿತ್ರೀಕರಣ ನಡೆಸುತ್ತಿರುವುದಕ್ಕೆ ಈ ಪ್ರಕಟಣೆ ಇಂಬುಗೊಟ್ಟಿದೆ.

ಭೂಗತಲೋಕದ ಕಥನವನ್ನು ತಮ್ಮದೇ ಆದ ಹಾಸ್ಯ ಬೆರೆಸಿದ ಶೈಲಿಯಲ್ಲಿ ಹೇಳುತ್ತಾ ಒಂದು ಬಗೆಯ ‘ಡಾರ್ಕ್ ಕಾಮಿಡಿ’ ತಂತ್ರವನ್ನು ಹೊಸೆಯುವ ಕಾರ್ತಿಕ್ ಸುಬ್ಬರಾಜ್, ಈ ಸಲವೂ ಅಂಥದ್ದೇ ವಸ್ತುವನ್ನು ತೆಗೆದುಕೊಂಡಿದ್ದಾರೆ. ಮುಖದ ತುಂಬ ರಕ್ತದ ಸಿಂಚನವಾಗಿರುವ ಸೂರ್ಯ ಪೋಸ್ಟರ್ ನೋಡಿ ಇದು ಯಾವ ಜಾಯಮಾನದ ಸಿನಿಮಾ ಎಂದು ಪ್ರೇಕ್ಷಕರು ಈಗಾಗಲೇ ಅಂದಾಜು ಮಾಡುತ್ತಿದ್ದಾರೆ.

ಚಿತ್ರದಲ್ಲಿ ನಾಯಕಿಯಾಗಿ ಪೂಜಾ ನಟಿಸಿದ್ದಾರೆ. ಜೋಜು ಜಾರ್ಜ್, ಜಯರಾಮ್, ಕರುಣಾಕರನ್, ನಾಸರ್, ಪ್ರಕಾಶ್ ರಾಜ್, ಸುಜಿತ್ ಶಂಕರ್, ಪ್ರೇಮ್ ಕುಮಾರ್, ರಾಮಚಂದ್ರನ್ ದುರೈರಾಜ್, ರಮ್ಯಾ ಸುರೇಶ್, ಜಾರ್ಜ್ ಮಾರ್ಯನ್ ಅವರನ್ನು ಒಳಗೊಂಡ ತಾರಾಗಣ ಕೂಡ ಸಿನಿಮಾದ ಭಿತ್ತಿ ಎಷ್ಟು ದೊಡ್ಡದಿರಬಹುದು ಎನ್ನುವುದಕ್ಕೆ ಕನ್ನಡಿ ಹಿಡಿಯುತ್ತದೆ.

ಸಂತೋಷ್ ನಾರಾಯಣನ್ ಸಂಗೀತ ಸಂಯೋಜನೆ ಮಾಡಿದ್ದು, ಕಾರ್ತಿಕೇಯನ್ ಶಾಂತಾರಾಮನ್, ಕಲ್ಯಾಣ್ ಸುಬ್ರಮಣಿಯನ್, ಜ್ಯೋತಿಕಾ ಹಾಗೂ ಸೂರ್ಯ ಸಿನಿಮಾ ಮೇಲೆ ಬಂಡವಾಳ ಹೂಡಿದ್ದಾರೆ.

ಕಳೆದ ವರ್ಷ ಡಿಸೆಂಬರ್‌ನಲ್ಲಿ ಚಿತ್ರದ ಟೀಸರ್ ಬಿಡುಗಡೆಯಾಗಿದ್ದು, ನೋಡುಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಚಿತ್ರೀಕರಣ ಮುಗಿಯುವವರೆಗೆ ಚಿತ್ರದ ಶೀರ್ಷಿಕೆಯನ್ನೇ ಅವರು ಅನಾವರಣಗೊಳಿಸಿರಲಿಲ್ಲ.

‘ಪಿಜ್ಜಾ’, ‘ಜಿಗರ್‌ಥಂಡಾ’, ‘ಮಹಾನ್’, ‘ಪೆಟ್ಟಾ’, ‘ಮರ್ಕ್ಯುರಿ’, ‘ಜಗಮೇ ತಂದಿರಂ’ ತಮಿಳು ಸಿನಿಮಾಗಳ ಮೂಲಕ ತಮ್ಮ ರುಜು ಹಾಕಿರುವ ಕಾರ್ತಿಕ್ ಸುಬ್ಬರಾಜ್, ಈಗ ‘ರೆಟ್ರೊ’ ಗೆಲ್ಲಿಸುವ ದಾರಿಗಳನ್ನು ಹುಡುಕುತ್ತಿದ್ದಾರೆ. ಸಿನಿಮಾದ ನಿರ್ಮಾಣೋತ್ತರ ಕೆಲಸಗಳು ಈಗ ನಡೆಯುತ್ತಿದ್ದು, ನಿಗದಿತ ದಿನಾಂಕವೇ ಚಿತ್ರ ಬಿಡುಗಡೆಯಾಗುವುದು ಖರೆ ಎನ್ನಲಾಗುತ್ತಿದೆ. ಶಂಕರ್ ನಿರ್ದೇಶನದ ‘ಗೇಮ್ ಚೇಂಜರ್’ ಸಿನಿಮಾಗೆ ಕಥೆ ನೀಡಿದವರೂ ಇದೇ ಕಾರ್ತಿಕ್ ಸುಬ್ಬರಾಜ್. ■